ಮೇಲೆ ಬೀಳುವ ಹೋಳು ಹೋಳು ಉಪ್ಪಿನ ಕಾಯಿಯ ಹಸಿ ಹಸಿಯಾದ ಸೊಬಗು ಬಲು ಚೆಂದ. ಬೀಪಿ ಗೀಪಿ ಇದ್ದವರು ತಿನ್ನದೆ ಹಾಗೆ ಬಿಟ್ಟರೆ ಹೊಟ್ಟೆ ಉರಿಯುತ್ತದೆ. ಈ ವಿಚಾರದಲ್ಲಿ ಹುಡುಗಿಯರೆ ಉತ್ತಮ. ಬಳಿದು ಬಾಯಿಗೆ ಹಾಕಿಕೊಳ್ಳುತ್ತಾರೆ. ಹಾಗೂ ಹೀಗೂ ಆಗಿ ಏಗಿ ಉಳಿದ ಕೆಲವು ಕಾಯಿಗಳು ಹಣ್ಣಿಗೆ ಬರುತ್ತವೆ. ಲಕ್ಷಾಂತರ ಹೂಗಳಲ್ಲಿ ಹತ್ತಾರು ಸಾವಿರ ಮಿಡಿಯಾಗುವ ಭಾಗ್ಯ ಕಂಡರೆ ಕೆಲವು ನೂರು ಅಥವಾ ಸಾವಿರ ಮಾತ್ರ ಹಣ್ಣಾಗುವ ಅದೃಷ್ಟ ಪಡೆಯುತ್ತವೆ. ಮರದಲ್ಲೆ ಹಣ್ಣಾದರೆ ಹಕ್ಕಿ, ಬಾವಲಿ, ಅಳಿಲುಗಳಿಗಾಹಾರ. ಹುಡುಗರ ಕಣ್ಣಿಗೆ ಬಿದ್ದರೆ ಹಣ್ಣಿಗೂ ಸಂಭ್ರಮ.

ಕೆಲವೊಮ್ಮೆ ಕೊಳ್ಳುವ ಸಾಬರು ನಿರ್ಲಕ್ಷ್ಯ ಮಾಡುತ್ತಿದ್ದರು. ಆಗ ನಾವೆ ಕಾಯಿಗಳನ್ನು ಇಳಿಸಿ ಮಾಗಿಸಿ ಮಾರಬೇಕಾಗಿತ್ತು. ಬುಟ್ಟಿಗಳಲ್ಲಿ ತುಂಬಿಸಿ ಮಾರಬೇಕಾಗುತ್ತಿತ್ತು. ಅಣ್ಣನ ಸೈಕಲ್ ಹಿಂದೆ ಪುಟ್ಟ ಹುಡುಗರು. ಅನೇಕ ಸಾರಿ ಕ್ಲಾಸ್ ಮೇಟುಗಳಾಗಿರುತ್ತಿದ್ದ ಹುಡುಗ, ಹುಡುಗಿಯರು ಸಿಗುತ್ತಿದ್ದರು. ಲಜ್ಜೆಯಲ್ಲಿ ಭೂಮಿಗೆ ಕುಸಿದು ಹೋಗುವಷ್ಟು ಹಿಂಸೆಯಾಗುತ್ತಿತ್ತು. ನೆನದರೆ ಈಗಲೂ ರೈತಾಪಿ ಹುಡುಗರ ಮುಜುಗರ, ಸಂಕೋಚಗಳಿಗೆ ಕಾರಣಗಳೆ ಇರುವುದಿಲ್ಲ ಎನ್ನಿಸುತ್ತದೆ. ಪಟ್ಟಣದಲ್ಲಿ ಬೀದಿ ಬದಿ ಅಂಗಡಿಗಳಲ್ಲಿ, ಕಿರಾಣಿ ಅಂಗಡಿಗಳಲ್ಲಿ ಕೂತು ಮಾರುವ ಹುಡುಗರು, ಹಾಲು, ಪೇಪರ್ ಹಾಕುವವರೂ ಹೀಗೆ ಮುಜುಗರ ಅನುಭವಿಸುತ್ತಾರೆಯೆ? ನನ್ನ ಕಣ್ಣಿಗಂತೂ ಹಾಗೆ ಕಂಡಿದ್ದಿಲ್ಲ. ನಾವು ಕುಗ್ಗಿ ಮುದ್ದೆಯಾಗಿ ಹಣ್ಣು ಮಾರಿ ಮನೆಗೆ ಬರುತ್ತಿದ್ದೆವು. ಮಾವು ಮಾರಿದ ಹಣ ಬಿತ್ತನೆಗೆ, ಗೊಬ್ಬರಕ್ಕೆ ಬಟ್ಟೆ, ಪುಸ್ತಕಕ್ಕೆ ಹೀಗೆ ಒದಗಿ ಬರುತ್ತಿತ್ತು.

ಪಾಕಕ್ಕೆ ಬಂದ ಮಾವನ್ನು ಇಳಿಸುವುದೊಂದು ಸಂಭ್ರಮವೊ ಸಂಭ್ರಮ. ಘಟಿಂಗರಾದ ನನ್ನಂತ ಹುಡುಗರಿಗೆ ಎಲ್ಲಿಲ್ಲದ ಬೇಡಿಕೆ ಇರುತ್ತಿತ್ತು. ಬಾಲ್ಯ ಕಾಲದ ಸಖ ಗೋವಿಂದ ಮತ್ತು ನಾನು ಮನಸ್ಸು ಮಾಡಿದರೆ ಎಂಥದೆ ಕಾಯನ್ನು ಇಳಿಸದೆ ಬಿಡುತ್ತರಲಿಲ್ಲ. ಕುಕ್ಕೆಗಳ ಮೂಲಕ ಹುಶಾರಾಗಿ ನೆಲಕ್ಕೆ ಇಳಿಸುತ್ತಾರೆ ಎಂಬ ಖಾತ್ರಿಯಿಂದ ಸಾಬರು ಮನೆ ಹತ್ತಿರ ಬಂದು 'ಕಾಯಿ ಇಳಿಸಬೇಕು ನಿಮ್ಮುಡುಗನ್ನ ಕಳಿಸು ತಾಯಿ' ಎಂದು ಗೋಗರೆಯುತ್ತಿದ್ದರು. ಅಮ್ಮ 'ಸಾಬ್ರೆ ಇನ್ನೊಂದ್ ವಾರಕ್ಕೆ ಇಸ್ಕೂಲು ಸುರುವಾಗ್ತದೆ, ಈ ಉಡ್ಗ ನೋಡುದ್ರೆ ಮೈ ಕೈ ಮ್ಯಾಲೆಲ್ಲ ಜೀಡಿ ಬೀಳಿಸ್ಕಂಡು ಒಳ್ಳೆ ಕಜ್ಜಿ ಬಂದೋನಂಗಾಗ್ತನೆ, ಅವ್ರ ಮೇಷ್ಟರು ಹೊಡೀತಾರೆ ಬ್ಯಾಡ ಬಿಡ್ರಿ. ಅವ್ನು ಅದ್ರಲ್ಲಿ ಸಂಪಾದ್ನೆ ಮಾಡದು ಅಷ್ಟರಲ್ಲೆ ಅದೆ' ಅನ್ನುತ್ತಿದ್ದಳು. ಆದರೂ ಸಾಬರು ಕೊಸರಾಡುತ್ತಿದ್ದರು. ದೊಡ್ಡವರಿಗೆ ಕೊಟ್ಟಷ್ಟು ಕೂಲಿ ಕೊಡುತ್ತೇವೆ ಎನ್ನುತ್ತಿದ್ದರು. ಆಗ ಕಾಯಿಳಿಸುವ, ಬಗೆ ಬಗೆಯ ಹಣ್ಣಗಳನ್ನು ಹೊಟ್ಟೆಗಿಳಿಸುವ ಆಸೆಯಿಂದ ಅಮ್ಮನ ಬಳಿ ದುಂಬಾಲು ಬೀಳುತ್ತಿದ್ದೆವು. ಕಡೆಗೆ ಬೈದು ಬಾರಿಸಿ ಅಮ್ಮ 'ಹಾಳಾಗೋಗು' ಎನ್ನುತ್ತಿದ್ದಳು. ಅಷ್ಟೆ ಸಾಕು, ನಾನು ಗೋವಿಂದ ಥೇಟ್ ರೆಕ್ಕೆ ಕಟ್ಟುತ್ತಿದ್ದೆವು.

ಕಾಯಿ ಇಳಿಸುವುದೊಂದು ಕಲೆ. ಮೊದಲು ಕೈಗೆಟುವ ಕಾಯಿಗಳನ್ನು ಇಳಿಸುತ್ತಿದ್ದೆವು. ನಂತರ ಸಾಬರು ತಂದ ಕುಕ್ಕೆಗಳಿಗೆ ಸಿಗುವ ಕಾಯಿಗಳನ್ನು ಇಳಿಸುತ್ತಿದ್ದೆವು. ಕುಕ್ಕೆಗಳೆಂದರೆ ಬಿದಿರು ಗಳಕ್ಕೆ ತುದಿಯಲ್ಲಿ ಮೊಟ್ಟೆಯಾಕಾರದಲ್ಲಿ ಕಂಬಿಯನ್ನೊ ಇಲ್ಲ ಬಿದಿರನ್ನೊ ಬಾಗಿಸಿ ಕಟ್ಟಿ ಅದಕ್ಕೆ ಸೆಣಬಿನ ಹುರಿಗಳಿಂದ ಬಲೆಯ ಹಾಗೆ ಹೆಣೆದ ಬುಟ್ಟಿಯನ್ನು ಕಟ್ಟಿರುತ್ತಿದ್ದರು. ಅದನ್ನು ಕಾಯಿಯ ತೊಟ್ಟಿಗೆ ಸಿಕ್ಕಿಸಿ ಎಳೆದರೆ ಕಾಯಿಗಳು ಅದರೊಳಗೆ ಸುಲಭವಾಗಿ ತೊಟ್ಟು ಕಳಚಿ ಬರುತ್ತಿದ್ದವು. ಕೆಲವೊಮ್ಮೆ ಕೊಂಬೆಯ ಸಹಾಯ ಪಡೆದು ಏಳೆಂಟು ಕಾಯಿಗಳನ್ನು ಕಿತ್ತು ನೆಲಕ್ಕೆ ಕೊಡುತ್ತಿದ್ದೆವು. ಇನ್ನೂ ಎತ್ತರಕ್ಕೆ ಹೋದರೆ ಕಾಯಿಗಳನ್ನು ಹುಷಾರಾಗಿ ಕಿತ್ತು 'ಇಗಾ' ಎಂದರೆ 'ಆ' ಎನ್ನುತ್ತಿದ್ದರು. ಮೇ ತಿಂಗಳ ಮೊದಲ ವಾರ ಮುಗಿಯಿತೆಂದರೆ ಊರ ಸುತ್ತೆಲ್ಲ 'ಇಗಾ' 'ಆ' ಶಬ್ದಗಳು ಧ್ವನಿ ಪ್ರತಿಧ್ವನಿಗಳಾಗಿ, ಕೇಕೆಗಳಾಗಿ ಸುತ್ತು ಬರುತ್ತಿದ್ದವು. ಸಂಜೆ ವೇಳೆಗೆ ಮೋಡ ಕಟ್ಟಿ ಆಕಾಶ ಧಡಾಲ್ ಭಡಾಲ್ ಎಂದರೆ ಸಾಬರ ಆತಂಕ ಹೆಚ್ಚುತ್ತಿತ್ತು. ಮರದ ಕೆಳಗೆ ನಿಂತವರ ಕೈಯಲ್ಲಿ ಸೆಣಬಿನ ಗೋಣಿ ಚೀಲ ಇರುತ್ತಿತ್ತು. ಅವರು 'ಆ' ಎಂದೊಡನೆ ಕಾಯಿ ಎಸೆಯುತ್ತಿದ್ದೆವು, ಮರದಲ್ಲಿ ಬಣ್ಣ ಬಣ್ಣಗಳನ್ನು ಬಳಿದುಕೊಂಡು ರಾರಾಜಿಸುತ್ತಿದ್ದ, ಹಣ್ಣಾದೊಡನೆ ಬೀಜವನ್ನೆಲ್ಲಾದರೂ ಹಾಕಿ ಜೀವ ಕೊಡು ಎಂದು ಗಿಳಿ, ಕಾಗೆ, ಅಳಿಲು, ಬಾವಲಿಗಳ ಕರೆಯುತ್ತಿದ್ದ ಅದಕ್ಕಾಗಿಯೆ ರಂಗು ಬಳಿದುಕೊಳ್ಳುತ್ತಿದ್ದ ಮಾವು ಗೋಣು ಮುರಿಸಿಕೊಂಡು ಹಾಲನ್ನು ರಕ್ತದಂತೆ ಕಾರಿಕೊಂಡು ಸಪ್ಪಗೆ ನೆಲದ ಮೇಲೆ ಮಲಗುತ್ತಿದ್ದವು. ಕಾಯಿ ಚೀಲದ ಮೇಲೆ ಬಿದ್ದು